## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 531(706)

ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 12.03.2025

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ಚಿಕ್ಕನಹಳ್ಳಿ ದಾನಿ ಶ್ರೀ ಉಗ್ರೇಗೌಡರು ಹಳೆ ಸರ್ವೆ ನಂ.190. ಹೊಸ ಸರ್ವೆ ನಂ. 202ರ 5-14 ಗುಂಟೆ ವಿಸ್ತೀರ್ಣ ಮತ್ತು ಹಳೆ ಸರ್ವೆ ನಂ. 187/1 ಮತ್ತು 2. ಹೊಸ ಸರ್ವೆ ನಂ. 199/4 ಮತ್ತು 5ರ 2-00 ಎಕರೆ ವಿಸ್ತೀರ್ಣದ ಜಮೀನುಗಳನ್ನು ಮಹಾರಾಜರ ಸರ್ಕಾರದ ಆದೇಶ ಸಂ: R 4769-70/361-07-06-1910 ರಂತೆ ಧರ್ಮಛತ್ರ ಮತ್ತು ಪಾಠಶಾಲೆ ಕಟ್ಟಲು ಈ ಜಮೀನುಗಳನ್ನು ಭೂ ಪರಿವರ್ತನೆಗೊಳಿಸಿ ಕಂದಾಯ ವಜಾಗೊಳಿಸಿ ಜಿಲ್ಲಾಧಿಕಾರಿಗಳ ಸಂರಕ್ಷಣೆಯಲ್ಲಿ ಸರ್ಕಾರ ವಹಿಸಿಕೊಂಡಿರುವುದು ನಿಜವೇ; | 1905ರ ಸರ್ಕಾರಿ ಆದೇಶದ ಪ್ರಕಾರ ಶ್ರೀ ಉಗ್ರೇಗೌಡರು ಜಮೀನನ್ನು ದಾನ ಮಾಡಿರುವ ಕುರಿತಂತೆ ಮುಟೇಷನ್ ಮತ್ತು ದಾಖಲೆಗಳಲ್ಲಿ ಯಾವುದೇ ನಮೂದು ಇರುವುದಿಲ್ಲ. ಆದರೆ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಚಿಕ್ಕನಹಳ್ಳಿ ಗ್ರಾಮದ ಹೊಸ ಸರ್ವೆ ನಂ. 202ರಲ್ಲಿ 5-10 ಎಕರೆ/ಗುಂಟೆ ಪೈಕಿ 00-10 ಗುಂಟೆ ಜಮೀನ್ನು ಎಸ್.ಕೆ.ವಿ.ಡಿ ಹೈಸ್ಕೂಲ್ ಹೆಸರಿಗೆ ಪಹಣಿಯ ಕಾಲಂ 12(2)ನಲ್ಲಿ ನಮೂದಿರುತ್ತದೆ. ಉಳಿದಂತೆ ಸರ್ವೆ 202ರ ಉಳಿಕೆ ವಿಸ್ತೀರ್ಣದಲ್ಲಿ ಶ್ರೀ ಉಗ್ರೇಗೌಡ ಮತ್ತು ಇತರರ ಹೆಸರುಗಳನ್ನು ದಾಖಲಿಸಲಾಗಿರುತ್ತದೆ.<br><br>ಮುಂದುವರೆದು ಸ.ನಂ.199/4 ರಲ್ಲಿ ನಾಗರಾಜು ಕೆ.ಬಿನ್. ಲೇ ಕುಂಟೇಗೌಡ ರವರ ಹೆಸರಿನಲ್ಲಿ 6-35 ಎಕರೆ/ಗುಂಟೆ ಮತ್ತು 199/5ರಲ್ಲಿ ಅಗ್ರಿಕಲ್ಚರ್ ಸ್ಕೂಲ್ ಹೆಸರಿನಲ್ಲಿ ವಿಸ್ತೀರ್ಣ 1-00 ಎಕರೆ ಇರುವುದು ಕಂಡುಬರುತ್ತದೆ. |
| ಆ) | ಹಾಗಿದ್ದಲ್ಲ. 1912ರ ಶ್ರೀ ಉಗ್ರೇಗೌಡರ ರಿಜಿಸ್ಟರ್ ವಿಲ್‌ನಲ್ಲಿ ನಮೂದಿಸಿರುವಂತೆ ಯಾವ ಕಾರಣಕ್ಕೂ ಈ ಆಸ್ತಿಗಳು ಪರಭಾರೆಯಾಗದಂತೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ:6430-50. A & I 195-15-02 ದಿನಾಂಕ: 06.05.1916ರಂತೆ ಈ ಆಸ್ತಿಗಳ ಸಂರಕ್ಷಣೆ ಹಾಗೂ ಧರ್ಮಛತ್ರ ಮತ್ತು ಈ ಪಾಠಶಾಲೆಗಳ ಆಡಳಿತವನ್ನು ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ನಡೆಸಬೇಕೆಂದು ಆದೇಶವಾಗಿದ್ದರೂ, ಜಿಲ್ಲಾಧಿಕಾರಿಗಳ ನ್ಯಾಯಾಲಯ ಪ್ರಕರಣ RP 97/15 ರಂತೆ ಈ ದಾನದ | ಸ.ನಂ.202, 1912ರ ರಿಜಿಸ್ಟರ್ ವಿಲ್ ನಲ್ಲಿ ನಮೂದಿಸಿರುವಂತೆ ಯಾವ ಕಾರಣಕ್ಕೂ ಸದರಿ ಜಮೀನುಗಳು ಯಾರಿಗೂ ಪರಭಾರೆಯಾಗದಂತೆ ಹಾಗೂ ಈ ಜಮೀನುಗಳ ಸಂಪೂರ್ಣ ಉತ್ಪತ್ತಿಯು ಈ ಪಾಠಶಾಲೆಗೆ ಸೇರಬೇಕೆಂದು ಮುಚ್ಚಳಿಕೆ ಬರೆದು ಕೊಟ್ಟಿದ್ದರ ಮೇರೆಗೆ ಸರ್ಕಾರಿ ಆದೇಶ ಸಂ.ಆರ್ 4769-70/361-07-6, ದಿನಾಂಕ:11.01.1910 ಪ್ರಕಾರ ಆದೇಶವಾಗಿರುವುದು ಕಂಡು ಬಂದಿದ್ದು, ಸ.ನಂ.202ರಲ್ಲಿ 5-10 ಎಕರೆ/ಗುಂಟೆ ರಲ್ಲಿ 0-10 ಗುಂಟೆ ಜಮೀನು ಎಸ್.ಕೆ.ಡಿ.ವಿ.ಹೆಚ್.ಎಸ್ ಶಾಲೆಯ ಹೆಸರಿಗೆ ಪಹಣಿ ಚಾಲ್ತಿಯಲ್ಲಿದ್ದು, ಸದರಿ ಪ್ರದೇಶದಲ್ಲಿ ಶಾಲಾ ಕಟ್ಟಡವಿದ್ದು ಸದರಿ ಶಾಲೆಯು ಸರ್ಕಾರಿ ಶಾಲೆಯಾಗಿದ್ದು,ಸರ್ಕಾರದ ವಶದಲ್ಲಿದ್ದು, ಉಳಿಕೆ ವಿಸ್ತೀರ್ಣಕ್ಕೆ ಹಾಲಿ ಪಹಣಿಯು ಖಾತೆದಾರರ ಹೆಸರಿನಲ್ಲಿ ಚಾಲ್ತಿಯಲ್ಲಿದ್ದು, ಮಾನ್ಯ ಜಿಲ್ಲಾಧಿಕಾರಿಗಳ ಆರ್‌ಪಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಜಮೀನುಗಳ ಒತ್ತುವರಿಯನ್ನು ತೆರವುಗೊಳಿಸುವಂತೆ ಮೇಲ್ಮನವಿ ಸಲ್ಲಿಸಿದ ಮೇರೆಗೆ ಮಾನ್ಯ ಜಿಲ್ಲಾಧಿಕಾರಿಗಳು ಸ್ಥಳ ತನಿಖೆ ಮಾಡದೆ ವಿಚಾರಣೆ ನಡೆಸದೆ ಶಾಲೆಯ ಹೆಸರಿಗೆ ಕೇವಲ 0-10 ಗುಂಟೆ ವಿಸ್ತೀರ್ಣ ಮಾತ್ರ ಎಂದು ತೀರ್ಪು ನೀಡಿದ ಪರಿಣಾಮ, ಶಾಲೆಯ ಕಟ್ಟಡಗಳು ಸೇರಿ ಶಾಲೆಗೆ ಬರುವ ದಾರಿಯೇ ಇಲ್ಲದೆ ಶಾಲೆಯನ್ನೇ ಮುಚ್ಚುವ ಸ್ಥಿತಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | 97/2015-16ರಲ್ಲಿ ಮೇಲ್ಮನವಿ ಪ್ರಕರಣವು ದಾಖಲಾಗಿದ್ದು, ವಿಚಾರಣಾ ಹಂತದಲ್ಲಿದ್ದು, ಪರಭಾರೆಯಾಗಿರುವುದು ಕಂಡುಬಂದಿರುವುದಿಲ್ಲ. |
| ಇ) | ಶಾಲೆಯ ಒತ್ತುವರಿಯನ್ನು ತೆರವುಗೊಳಿಸಿ ದಾನಿಗಳು ಆಶ್ರಯದಂತೆ/ಸರ್ಕಾರದ ಆದೇಶದಂತೆ ಶಾಲೆಯ ಆಸ್ತಿಯನ್ನು ಉಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಸ.ನಂ.202ರಲ್ಲಿ ಪೈಕಿ 0-10 ಗುಂಟೆ ಶಾಲೆಯ ಹೆಸರಲ್ಲಿ ಇದ್ದು ಹಾಲಿ ಶಾಲೆಯ ಕಟ್ಟಡ ಇರುತ್ತದೆ. ಉಳಿಕೆ ಜಮೀನಿನಲ್ಲಿ ಸುಮಾರು 80 ವರ್ಷಗಳಿಂದಲೂ ಕಂದಾಯ ದಾಖಲೆಗಳಲ್ಲಿ ಖಾಸಗಿ ವ್ಯಕ್ತಿಗಳ ಹೆಸರು ನಮೂದು ಇದ್ದು, ಆ ವಿಚಾರವಾಗಿ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಆರ್‌ಪಿ 97/2015-16 ಅಂತಿಮ ಆದೇಶದಂತೆ ನಿಯಮಾನುಸಾರ ಕ್ರಮವಹಿಸಲಾಗುವುದು. |

ಸಂಖ್ಯೆ: ಆರ್‌ಡಿ 25 ಎಲ್‌ಜಿಟಿ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು